ಮುತ್ತೂಟ್ ಎಂ-ಕ್ರೆಡ್ ಲಿ. ನಲ್ಲಿ ಈ ಬಾರಿ ದಾಖಲೆ ಬೆಳವಣಿಗೆ

ತೆರಿಗೆ ನಂತರದ ಲಾಭ ವಾರ್ಷಿಕ ಶೇ.232.73 ರಷ್ಟು ಏರಿಕೆ | ಮೊದಲ ತ್ರೈಮಾಸಿಕದಲ್ಲಿ 399.64 ಕೋಟಿ ರೂಪಾಯಿ ಆದಾಯ

■ ಉದಯವಾಣಿ ಸಮಾಚಾರ

ಬೆಂಗಳೂರು: ಭಾರತದ ವಿಶ್ವಾಸಾರ್ಹ ಚಿನ್ನದ ಸಾಲ ನೀಡುವ ಎನ್‌ಬಿಎಫ್‌ಸಿಗಳಲ್ಲಿ ಒಂದಾದ ಮುತ್ತೂಟ್ ಎಂಕ್ರೆಡ್ ಲಿ. (ಹಿಂದೆ ಮುತ್ತೂಟ್ಟು ಮಿನಿ ಫೈನಾನ್ಸಿಯರ್ಸ್ ಲಿ. ಎಂದು ಕರೆಯಲ್ಪಡುತ್ತಿತ್ತು), ಜೂನ್ 30, 2026 ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ ಬಲವಾದ ಆರ್ಥಿಕ ಸಾಧನೆಯನ್ನು ಪ್ರಕಟಿಸಿದೆ.

ತೆರಿಗೆ ನಂತರದ ಲಾಭವು (ಪಿಎಟಿ) ವಾರ್ಷಿಕವಾಗಿ ಶೇ.232.73 ರಷ್ಟು ಏರಿಕೆಯಾಗಿ 100.29 ಕೋಟಿ ರೂ.ಗೆ ತಲುಪಿದೆ. ನಿರ್ವಹಣೆಯಲ್ಲಿರುವ ಆಸ್ತಿಯ ಮೌಲ್ಯವು ವಾರ್ಷಿಕವಾಗಿ ಶೇ.58.53 ರಷ್ಟು ಬೆಳವಣಿಗೆ ಕಂಡು 7,098.38 ಕೋಟಿಯಷ್ಟಾಗಿದೆ. 2026-27ರ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ಒಟ್ಟು ಆದಾಯವು 399.64 ಕೋಟಿಯಷ್ಟಿದ್ದು, ಇದು ವಾರ್ಷಿಕವಾಗಿ ಶೇ.76.38 ರಷ್ಟು ಬೆಳವಣಿಗೆ ದಾಖಲಿಸಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಆಸ್ತಿ ಮೇಲಿನ ಆದಾಯದಲ್ಲಿ ಗಣನೀಯ ಸುಧಾರಣೆ: ಜೂನ್ 30, 2026ರ ವೇಳೆಗೆ ಒಟ್ಟು ಎನ್‌ಪಿಎ ಶೇ.0.59 ಮತ್ತು ನಿವ್ವಳ ಎನ್‌ಪಿಎ ಶೇ.0.24 ರಷ್ಟಿರುವ ಮೂಲಕ, ಕಂಪನಿಯು ಬಲವಾದ ಆಸ್ತಿ ಗುಣಮಟ್ಟ ಮತ್ತು ಕಾರ್ಯಾಚರಣೆಯ ಶಿಸ್ತನ್ನು ಕಾಯ್ದುಕೊಂಡಿದೆ. ಮಾರ್ಚ್ 31, 2026 ರಲ್ಲಿದ್ದ ಶೇ. 2.84 ಕ್ಕೆ ಹೋಲಿಸಿದರೆ, 2026-27 ರ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ಆಸ್ತಿ ಮೇಲಿನ ಆದಾಯವು ಶೇ.5.17ಕ್ಕೆ ಗಣನೀಯವಾಗಿ ಸುಧಾರಿಸಿದೆ. ಇದು ಕಂಪನಿಯ ಲಾಭದಾಯಕತೆ ಮತ್ತು ಆಸ್ತಿ ಬಳಕೆಯ ಸಾಮರ್ಥ್ಯದಲ್ಲಿನ ಬಲವಾದ ಪ್ರಗತಿಯನ್ನು ಪ್ರತಿಬಿಂಬಿಸುತ್ತದೆ.

ಸಕಾರಾತ್ಮಕ ಆರಂಭ: ಮುತ್ತೂಟ್ ಎಂಕ್ರೆಡ್ ಲಿ.ನ ವ್ಯವಸ್ಥಾಪಕ ನಿರ್ದೇಶಕ ಮ್ಯಾಥ್ಯೂ ಮುತ್ತೂಟ್ಟು ಮಾತನಾಡಿ, ಮುತ್ತೂಟ್ ಎಂಕ್ರೆಡ್‌ಗೆ 2027ನೇ ಹಣಕಾಸು ವರ್ಷದ ಮೊದಲ ತ್ರೈಮಾಸಿಕವು ಸಕಾರಾತ್ಮಕವಾಗಿ ಆರಂಭವಾಗಿದೆ. ಸುಸ್ಥಿರ ಬೆಳವಣಿಗೆ, ಜವಾಬ್ದಾರಿಯುತ ಸಾಲ ನೀಡುವಿಕೆ ಮತ್ತು ನಮ್ಮ ಎಲ್ಲ ಪಾಲುದಾರರಿಗೆ ದೀರ್ಘಕಾಲೀನ ಮೌಲ್ಯವನ್ನು ಸೃಷ್ಟಿಸಲು ನಮ್ಮ ಸಾಂಸ್ಥಿಕ ಸಾಮರ್ಥ್ಯಗಳನ್ನು ಬಲಪಡಿಸುವತ್ತ ನಾವು ಗಮನಹರಿಸುತ್ತೇವೆ ಎಂದು ಹೇಳಿದರು.

> ವಿಸ್ತರಿಸುತ್ತಿರುವ ನಮ್ಮ ಶಾಖಾ ಜಾಲ ಮತ್ತು ತಂತ್ರಜ್ಞಾನ-ಚಾಲಿತ ಪ್ರಕ್ರಿಯೆಗಳ ಬೆಂಬಲದೊಂದಿಗೆ, ನಮ್ಮ ಭದ್ರತ ಸಾಲದ ಪೋರ್ಟ್‌ಫೋಲಿಯೊದಲ್ಲಿ ಉತ್ತಮ ಬೆಳವಣಿಗೆಯ ವೇಗವನ್ನು ನಾವು ಕಾಣುತ್ತಿದ್ದೇವೆ.
>
> ● ಪಿ.ಇ.ಮಥಾಯಿ, ಮುತ್ತೂಟ್ ಎಂಕ್ರೆಡ್ ಲಿ.ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ

MANAPPURAM FINANCE LTD. — **ಹರಾಜು ಪ್ರಕಟಣೆ**

CIN : L65910KL1992PLC006623
Registered Office : W - 4/ 638A, Manappuram House, P.O. Valapad, Thrissur - 680 567, Kerala, India

ಈ ಕೆಳಗಿನ ಶಾಖೆಗಳಲ್ಲಿ ಅಡವಿಟ್ಟಿರುವ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು 16/09/2026 ರಂದು ಬೆಳಿಗ್ಗೆ 10.00 ಗಂಟೆಯಿಂದ ಈ ಕೆಳಗಿನ ಶಾಖೆಗಳಲ್ಲಿ ನಡೆಸಲು ಉದ್ದೇಶಿಸಲಾಗಿದೆ ಎಂದು ಈ ಮೂಲಕ ವಿಶೇಷವಾಗಿ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ತಿಳಿಸಲಾಗಿದೆ. ನೋಂದಾಯಿತ ಪತ್ರಗಳ ಮೂಲಕ ತಿಳಿಸಲಾಗಿದ್ದರೂ ಸಾಲದ ಮೊತ್ತವನ್ನು ಪಾವತಿಸಲು ವಿಫಲರಾದ ಸುಸ್ತಿದಾರ ಗ್ರಾಹಕರ ಚಿನ್ನದ ಆಭರಣಗಳನ್ನು ಹರಾಜು ಮಾಡಲಾಗುತ್ತದೆ. ಹರಾಜಾಗದ ವಸ್ತುಗಳನ್ನು ಯಾವುದೇ ಸೂಚನೆ ಇಲ್ಲದೆ ಬೇರೆ ಯಾವುದೇ ದಿನಗಳಲ್ಲಿ ಹರಾಜು ಮಾಡಲಾಗುವುದು. ಹರಾಜಿನ ದಿನಾಂಕದಂದು ಚಿನ್ನದ ಮಾರುಕಟ್ಟೆ ಬೆಲೆ ಅಥವಾ ಸರಾಸರಿ 30 ದಿನಗಳ IBJA ದರದ 65%, ಯಾವುದು ಹೆಚ್ಚೋ ಅದರ ಆಧಾರದ ಮೇಲೆ ಮೀಸಲು ಬೆಲೆಯನ್ನು ನಿಗದಿಪಡಿಸಲಾಗುತ್ತದೆ. ಸ್ಥಳ ಅಥವಾ ದಿನಾಂಕದಲ್ಲಿನ ಬದಲಾವಣೆಯನ್ನು (ಯಾವುದಾದರೂ ಇದ್ದರೆ) ಹರಾಜು ಕೇಂದ್ರದಲ್ಲಿ ಮತ್ತು ಕಂಪನಿಯ ವೆಬ್‌ಸೈಟ್‌ನಲ್ಲಿ ಪ್ರದರ್ಶಿಸಲಾಗುತ್ತದೆ. ಕೆಳಗೆ ನೀಡಲಾದ ವಿವರಗಳು ಶಾಖೆಯ ಹೆಸರು, ಸಾಲದ ಸಂಖ್ಯೆ, ಗ್ರಾಹಕರ ಹೆಸರು, ಒಟ್ಟು ಬಾಕಿ ಮೊತ್ತ ('ಸರಿ) ಐಟಂ ಹೆಸರಿನ ಕ್ರಮದಲ್ಲಿದೆ

ಅಡವುಗಳ ಪಟ್ಟಿ :

ಹಾಸನ ; ಧನಲಕ್ಷ್ಮೀ ಥಿಯೇಟರ್ ಚನ್ನರಾಯಪಟ್ಟಣ, 0133470700026309, ಜಿ.ಮನೀಶ್ ಕುಮಾರ್, 48000/-, ಚೈನ್ 1, 6326, ಮನೋಜ್ ಕುಮಾರ್, 100000/-, ಫಿಂಗರ್ ರಿಂಗ್ಸ್ 1,ಸ್ಟಡ್ 2, 6336, ಬಾಲು ಬಿ ಎನ್, 205000/-, ಮಟ್ಟಿ 1,ಡ್ರಾಪ್ಸ್ & ಸ್ಟಡ್ 1,ಚೈನ್ 1, 6340, ಅವಿನಾಶ್ ಜಿ ಎನ್, 15000/-, ಸ್ಟಡ್ 1, 6377, ಮಂಜೇಗೌಡ ಎಚ್ ಆರ್, 19499/-,
ಸ್ಟಡ್ 1, 6381, ದಿವ್ಯ ಜೆ ಟಿ, 49000/-, ಡ್ರಾಪ್ಸ್ & ಸ್ಟಡ್ 1, 6382, ದಿವ್ಯ ಜೆ ಟಿ, 40000/-, ಫಿಂಗರ್ ರಿಂಗ್ಸ್ 1,ಸ್ಟಡ್ 1, 6419, ಶೇಖರ್‌ಕುಮಾರ್, 45000/-, ಡ್ರಾಪ್ಸ್ & ಸ್ಟಡ್ 1, 6421, ಚಂದ್ರಶೇಖರ್, 150000/-, ಮಟ್ಟಿ 1,ಚೈನ್ 1, 6422, ಚಂದ್ರಶೇಖರ್, 110000/-, ಡ್ರಾಪ್ಸ್ & ಸ್ಟಡ್ 2, 6435, ಮನೋಜ್ ಕುಮಾರ್, 132000/-, ಬ್ಯಾಂಗಲ್ 1,ಡ್ರಾಪ್ಸ್ 1, 6448,
[illegible]
ಫಿಂಗರ್ ರಿಂಗ್ಸ್ 2.

ಮೇಲಿನ ಹರಾಜಿನಲ್ಲಿ ಭಾಗವಹಿಸಲು ಬಯಸುವ ವ್ಯಕ್ತಿಗಳು ಈ ಮುಂದೆ ತಿಳಿಸಿರುವುದನ್ನು ಅನುಸರಿಸತಕ್ಕದ್ದು:- ಆಸಕ್ತಿಯುಳ್ಳ ಸವಾಲು ಕೂಗುವವರು (ಬಿಡ್ದರ್ ಗಳು) ಎನ್‌ಇಎಫ್ ಟಿ/ಆರ್ ಟಿಜಿಎಸ್ ವಿಧಾನದ ಮೂಲಕ ರೂ. 10,000/ ಅನ್ನು ಇಎಂಡಿ (ವಿಫಲಗೊಂಡ ಸವಾಲು ಕೂಗುವವರಿಗೆ ಮರುಪಾವತಿಯಾಗುವಂಥದ್ದು) ಆಗಿ ಹರಾಜಿನ ದಿನದಂದೇ ಸಲ್ಲಿಸಬೇಕು. ಸವಾಲು ಕೂಗುವವರು ಮಾನ್ಯವಾದ ಐಡಿ ಕಾರ್ಡ್/ಪ್ಯಾನ್ ಕಾರ್ಡ್ ಇಟ್ಟುಕೊಂಡಿರಬೇಕು. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು 9072607147 ಅನ್ನು ಸಂಪರ್ಕಿಸಿ.

ಅಧಿಕೃತ ಅಧಿಕಾರಿ.
ಮಣಪ್ಪುರಂ ಫೈನಾನ್ಸ್ ಲಿ. ಪರವಾಗಿ

ಅರ್ಚಕರಿಗೆ ಬಿಳಿಮಚ್ಚೆ, ಅಡ್ಡಿ: ಪರಿಶೀಲನೆಗೆ ಕೋರ್ಟ್ ಕಮಿಷನರ್

■ ಉದಯವಾಣಿ ಸಮಾಚಾರ

ಬೆಂಗಳೂರು: ಚರ್ಮ ಸಂಬಂಧಿ ಸಮಸ್ಯೆಯಿಂದ ಬಳಲುತ್ತಿರುವ ಮೈಸೂರಿನ ಚಾಮುಂಡೇಶ್ವರಿ ದೇವಾಲಯದ ಅನುವಂಶಿಕ ಅರ್ಚಕರಿಗೆ ದೇವಾಲಯದಲ್ಲಿ ಪೂಜೆ ಸಲ್ಲಿಸಲು ಮುಕ್ತ ಅವಕಾಶ ನೀಡಲಾಗಿದೆಯೇ ಅಥವಾ ಆಡಳಿತ ಮಂಡಳಿಯಿಂದ ಅಡ್ಡಿಪಡಿಸಲಾಗುತ್ತಿದೆಯೇ ಎಂಬ ಬಗ್ಗೆ ಪರಿಶೀಲಿಸಲು ಇಬ್ಬರು ವಕೀಲರನ್ನು 'ಕೋರ್ಟ್ ಕಮಿಷನರ್'ಗಳನ್ನಾಗಿ ಹೈಕೋರ್ಟ್ ನೇಮಿಸಿದೆ.

ನ್ಯಾಯಾಲಯದ ಆದೇಶದ ಹೊರತಾಗಿಯೂ ಪೂಜಾ ಕೈಂಕರ್ಯಗಳಿಗೆ ಅಡ್ಡಿಪಡಿಸಲಾಗುತ್ತಿದೆ ಎಂದು ದೂರಿ ದೇವಾಲಯದ 'ಸನ್ನಿಧಿ ಪರಿಚಾರಕ ಅರ್ಚಕ'ರೊಬ್ಬರು ಸಲ್ಲಿಸಿದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದ ರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಕೋರ್ಟ್ ಕಮಿಷನರ್ ನೇಮಕ ಮಾಡಿ ಆದೇಶಿಸಿದೆ.

ನ್ಯಾಯಾಲಯದ ಆದೇಶದ ಹೊರತಾಗಿಯೂ ಪೂಜಾ ಕೈಂಕರ್ಯ ನೆರವೇರಿಸಲು ಅವಕಾಶ ನೀಡಲಾಗುತ್ತಿಲ್ಲ ಎಂಬ ಅರ್ಜಿದಾರರ ಪರ ವಕೀಲರ ವಾದವನ್ನು ಗಂಭೀರವಾಗಿ ಪರಿಗಣಿಸಿದ ನ್ಯಾಯಪೀಠ, ವಕೀಲರಾದ ನಾರಾಯಣರಾವ್ ಹಾಗೂ ಶಿವರುದ್ರ ಅವರನ್ನು ಕೋರ್ಟ್ ಕಮಿಷನರ್‌ಗಳಾಗಿ ನೇಮಕ ಮಾಡಿತು. ಅಲ್ಲದೇ, ಇಬ್ಬರು ಕೋರ್ಟ್ ಕಮಿಷನರ್‌ಗಳು ದೇವಾಲಯದ ಗರ್ಭಗುಡಿ ಹೊರತುಪಡಿಸಿ ಅರ್ಚಕರೊಂದಿಗೆ ದೇವಾಲಯಕ್ಕೆ ಭೇಟಿ ಕೊಟ್ಟು ವಸ್ತುಸ್ಥಿತಿ ಏನಿದೆ ಎಂದು ತಿಳಿದುಕೊಳ್ಳಬೇಕು. ಇದಕ್ಕೆ ದೇವಾಲಯದ ಆಡಳಿತ ಮಂಡಳಿ ಸಂಪೂರ್ಣ ಸಹಕಾರ ನೀಡಬೇಕು. ಕೋರ್ಟ್ ಕಮಿಷನರ್‌ಗಳು ವಸ್ತುಸ್ಥಿತಿ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು ಎಂದು ಆದೇಶಿಸಿತು.

ಅರ್ಚಕರಿಗೆ ದೇಹದಲ್ಲಿ ಬಿಳಿ ಮಚ್ಚೆ ಇದೆ ಎಂಬ ಕಾರಣಕ್ಕೆ ಅವರು ಪೂಜೆ ಮಾಡುವುದಕ್ಕೆ ಕೆಲವು ಭಕ್ತರಿಂದ ಆಕ್ಷೇಪ ವ್ಯಕ್ತವಾಗಿತ್ತು. ಅರ್ಚಕರಿಗೆ ಇರುವ ಸಮಸ್ಯೆ ಸಾಂಕ್ರಾಮಿಕವಲ್ಲ ಎಂದು ವೈದ್ಯಕೀಯ ವರದಿ ಹೇಳಿತ್ತು. ಆದಾಗ್ಯೂ ಪೂಜೆಗೆ ನಿರ್ಬಂಧ ವಿಧಿಸಲು ಆಡಳಿತ ಮಂಡಳಿ ಮುಂದಾಗಿತ್ತು. ಅರ್ಜಿದಾರರಿಗೆ ಬಿಳಿ ಮಚ್ಚೆಗಳಿವೆ ಎಂಬ ಕಾರಣಕ್ಕೆ ಪೂಜಾ ಕಾರ್ಯಗಳಿಗೆ ಅಡ್ಡಿಪಡಿಸುವಂತಿಲ್ಲ. ಈ ಕಾಯಿಲೆ ಸಾಂಕ್ರಾಮಿಕವಲ್ಲ. ಧರ್ಮಗ್ರಂಥಗಳಲ್ಲಿಯೂ ಪೂಜೆಗೆ ಯಾವುದೇ ಅಡ್ಡಿಯಿಲ್ಲ. ಕೇವಲ ಸಾಂಕ್ರಾಮಿಕ ರೋಗವಲ್ಲದ ಆರೋಗ್ಯ ಸಮಸ್ಯೆಯ ಆಧಾರದ ಮೇಲೆ ವ್ಯಕ್ತಿಯೊಬ್ಬನನ್ನು ಪೂಜೆಯಿಂದ ಹೊರಗಿಡುವುದು ಸಂವಿಧಾನದ 14ನೇ ವಿಧಿಯ ಸಮಾನತೆಯ ಹಕ್ಕಿನ ಉಲ್ಲಂಘನೆಯಾಗುತ್ತದೆ ಎಂದು ತಿಳಿಸಿ, ಅರ್ಜಿದಾರರ ಪೂಜಾ ಕಾರ್ಯಗಳಿಗೆ ಅಡ್ಡಿಯಾಗದಂತೆ ಕ್ರಮ ವಹಿಸಲು ನ್ಯಾಯಾಲಯ ನಿರ್ದೇಶನ ನೀಡಿತ್ತು. ಆದರೂ ಅರ್ಜಿದಾರರ ಪೂಜಾ ಕಾರ್ಯಗಳಿಗೆ ಅಡ್ಡಿಯಾದ ಹಿನ್ನೆಲೆಯಲ್ಲಿ ಅವರು ಹೈಕೋರ್ಟ್‌ಗೆ ಮಧ್ಯಂತರ ಅರ್ಜಿ ಸಲ್ಲಿಸಿದ್ದರು.

ಸಿದ್ದುಕೈ ಬಿಟ್ಟಿದ್ದ ನಾಗೇಂದ್ರಗೆ ಡಿಕೆಶಿ ಮರುಸೇರ್ಪಡೆ ಏಕೆ?: ಶಾಸಕ ರೆಡ್ಡಿ

ಬಳ್ಳಾರಿ: ವಾಲ್ಮೀಕಿ ನಿಗಮದಲ್ಲಿ ಹಗರಣ ನಡೆದಿದೆ ಎಂದು ಸದನದಲ್ಲೇ ಒಪ್ಪಿಕೊಂಡಿದ್ದ ಹಿಂದಿನ ಸಿಎಂ ಸಿದ್ದರಾಮಯ್ಯ, ನಾಗೇಂದ್ರ ಅವರನ್ನು ಸಂಪುಟದಿಂದ ಕೈಬಿಟ್ಟಿದ್ದರೂ ಇದೀಗ ಹಾಲಿ ಸಿಎಂ ಡಿ.ಕೆ.ಶಿವಕುಮಾರ್ ಪುನಃ ಸಂಪುಟಕ್ಕೆ ಏಕೆ ತೆಗೆದುಕೊಂಡಿದ್ದಾರೆ ಎಂದು ಗಂಗಾವತಿ ಶಾಸಕ ಜನಾರ್ದನರೆಡ್ಡಿ ಪ್ರಶ್ನಿಸಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿ, ಹಿಂದಿನ ಸಿಎಂ ಸಿದ್ದರಾಮಯ್ಯ ವಾಲ್ಮೀಕಿ ನಿಗಮದಲ್ಲಿ 187 ಕೋಟಿ ಅಲ್ಲ, 87 ಕೋಟಿ ಹಗರಣ ನಡೆದಿದೆ ಎಂದು ಸದನದಲ್ಲೇ ಒಪ್ಪಿಕೊಂಡಿದ್ದಾರೆ. ಅದಕ್ಕಾಗಿಯೇ ನಾಗೇಂದ್ರನನ್ನು ಅಂದು ಸಚಿವ ಸ್ಥಾನದಿಂದ ಕೈಬಿಟ್ಟರು. ಇದೀಗ ಹಾಲಿ ಸಿಎಂ ಡಿ.ಕೆ.ಶಿವಕುಮಾರ್ ಪುನಃ ಸಂಪುಟಕ್ಕೆ ಸೇರಿಸಿಕೊಂಡಿದ್ದು, ಈ ನಡುವೆ ಏನು ಬದಲಾಗಿದೆ ಎಂದು ಪ್ರಶ್ನಿಸಿದರು.

ಬಾವಿಗೆ ಬಿದ್ದು ಇಬ್ಬರು ಸೋದರಿಯರು, ಸಾವು; ತಂದೆ ಶವಕ್ಕೆ ಹುಡುಕಾಟ

ಮುದ್ದೇಬಿಹಾಳ (ವಿಜಯಪುರ): ಸಾಲಬಾಧೆ ತಾಳದೆ ಇಬ್ಬರು ಸೋದರಿಯರು ಹಾಗೂ ತಂದೆ ತೆರೆದ ಬಾವಿಗೆ ಜಿಗಿದು ಆತ್ಮಹತ್ಯೆ ಮಾಡಿಕೊಂಡ ಘಟನೆ ಶುಕ್ರವಾರ ಸಂಜೆ ತಾಲೂಕಿನ ಬಳಬಟ್ಟಿ ಗ್ರಾಮದಲ್ಲಿ ನಡೆದಿದೆ. ಇಬ್ಬರು ಸೋದರಿಯರ ಮೃತದೇಹ ಸಿಕ್ಕಿದ್ದು, ತಂದೆಗಾಗಿ ಶೋಧ ನಡೆದಿದೆ. ರಕ್ಷಿತಾ (15), ಸೃಷ್ಟಿ (10) ಮೃತದೇಹ ಸಿಕ್ಕಿದ್ದು, ತಂದೆ ಸಾಬಣ್ಣನಿಗಾಗಿ ಅಗ್ನಿಶಾಮಕ ದಳ ಸಿಬ್ಬಂದಿ ಶೋಧ ನಡೆಸುತ್ತಿದ್ದಾರೆ. ಸಾಬಣ್ಣ ಅವರಿಗೆ ನಾಲ್ವರು ಹೆಣ್ಣು ಮಕ್ಕಳಿದ್ದು, ಸಾಲಬಾಧೆ ಅತಿಯಾಗಿ ಕಾಡುತ್ತಿತ್ತು ಎನ್ನಲಾಗಿದೆ. ಶುಕ್ರವಾರ ಸಂಜೆ ಇಬ್ಬರು ಸೋದರಿಯರು ತೆರೆದ ಬಾವಿಗೆ ಬಿದ್ದು ಮೃತಪಟ್ಟಿದ್ದಾರೆ. ಸಾಬಣ್ಣ ಕೂಡ ಅದೇ ಬಾವಿಗೆ ಬಿದ್ದಿದ್ದು ಶೋಧ ನಡೆದಿದೆ. ನಿಡಗುಂದಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.